...ದರಂತೆ ಕೆಳಗೆ ಮೂರು ಬಿಂದುಗಳಿರುವ ಚಿತ್ರವನ್ನು ...ರಳಿನಿಂದ ಒತ್ತಿದಾಗ ಮೇಲಿನ ಚಿತ್ರದಲ್ಲಿ ...ಣಿಸಿದಂತೆ Update, Dashboard, Give Feeback, Change language, Registration for subject matter specialist, Video Gallery and Registration of Agriculture ಎಂದು ಕಾಣಿಸುತ್ತದೆ.




Update ಅನ್ನು ಬೆರಳಿನಿಂದ ಒತ್ತಿದಾಗ ಅದು ಗೂಗಲ್ ಪ್ಲೇ ಸ್ಟೋರಗೆ ಹೋಗುತ್ತದೆ. ಈ ಆ್ಯಪ್‌ನ ಹೊಸ ವರ್ಷನ್ Update ಮಾಡಿ ಕೊಳ್ಳಬಹುದಾಗಿದೆ.

- Dashboard ಮೇಲೆ ಬೆರಳು ಒತ್ತಿದಾಗ ಒಟ್ಟು ಎಷ್ಟು ರೈತರು ನೊಂದಣಿ ಮಾಡಿದ್ದಾರೆ. ಎಷ್ಟು ಜನ ಈ ಆ್ಯಪ್‌ನ ವೀಕ್ಷಣೆ ಮಾಡಿದ್ದಾರೆ. ದೇಶದಲ್ಲಿ ಒಟ್ಟು ಇರುವ ಕೆ.ವಿ.ಕೆ.ಗಳ ಸಂಖ್ಯೆ, ಕೃಷಿ ತಂತ್ರಜ್ಞಾನ ಅನ್ವಯಿಕ ಸಂಶೋಧನಾ ಸಂಸ್ಥೆಗಳ ಸಂಖ್ಯೆ. ಹಾಗೂ ಕೃಷಿ ವಿಜ್ಞಾನ ಕೇಂದ್ರದ ಮುಂಬರುವ ಹಾಗೂ ಈಗಾಗಲೇ ಆಗಿ ಹೋಗಿರುವ ಚಟುವಟಿಕೆಗಳ ಮಾಹಿತಿಯನ್ನು ಕ್ರೋಢಿಕರಿಸಿದ ಬಾರ ಗ್ರಾಫ್ ಚಿತ್ರವನ್ನು ವಿಕ್ಷೀಸಬಹುದಾಗಿದೆ.




ATARI ಎಂಬ ಐಕಾನ ಮೇಲೆ ಬೆರಳಿನಿಂದ ಒತ್ತಿದಾಗ ಆಯಾ ATARI ವಲಯದ ಅಂದರೆ, ದೇಶದ ಒಟ್ಟು ಎಲ್ಲಾ ಕೆ.ವಿ.ಕೆ.ಗಳ ಹೆಸರು, ಇಮೇಲ್ ಐ.ಡಿ., ದೂರವಾಣಿ ಸಂಖ್ಯೆಯ ಮಾಹಿತಿ ಪಡೆಯ ಬಹುದಾಗಿದೆ.

- Change Language ಐಕಾನ ಮೇಲೆ ಬೆರಳಿನಿಂದ ಒತ್ತಿ ತಮಗೆ ಬೇಕಾದ ಭಾಷೆಗಳಾದ ಇಂಗ್ಲೀಷ, ಹಿಂದಿ, ಬೆಂಗಾಲಿ, ತಮಿಳ್, ಗುಜರಾತಿ, ಕನ್ನಡ, ಮರಾಠಿ ಹಾಗೂ ತೆಲಗು ಭಾಷೆ ಆಯ್ಕೆ ಮಾಡಿ ನೋಡಬಹುದಾಗಿದೆ.
- ಹಾಗೂ Feedback ಎಂಬ ಐಕಾನ ಮೇಲೆ ಬೆರಳಿನಿಂದ ಒತ್ತಿದಾಗ ವಿಷಯ ಹಾಗೂ ಸಂದೇಶವನ್ನು ಭರ್ತಿ ಮಾಡಿ Submit ಬಟನ್ ಒತ್ತಿ ಸಲ್ಲಿಸಬಹುದಾಗಿದೆ.
- Registration for subject matter specialist ಎಂಬ ಐಕಾನ ಮೇಲೆ ಬೆರಳಿನಿಂದ ಒತ್ತಿ ಅವರ ಹೆಸರು, ವಿಳಾಸ, ಪಿನಕೋಡ್ ಸಂಖ್ಯೆ, ಇ-ಮೇಲ್ ವಿಳಾಸ, ದೂರವಾಣಿ ಸಂಖ್ಯೆ, ಯುಜರನೇಮ್ ಮತ್ತು ಪಾಸವರ್ಡ ಬಳಸಿದ ನಂತರ ಲಾಗಿನ್ ಆಗಿ ಅಲ್ಲಿ ಬರುವ ಆಯ್ಕೆಗಳನ್ನು ಬಳಸಿ ನೊಂದಣಿ ಮಾಡಬಹುದಾಗಿದೆ.
- Video Gallery ಐಕಾನ ಮೇಲೆ ಬೆರಳಿನಿಂದ ಒತ್ತಿ ರೈತರು, ಕೃಷಿ ವಿಜ್ಞಾನ ಕೇಂದ್ರಗಳ ಕೃಷಿ ತಂತ್ರಜ್ಞಾನಗಳ ಕುರಿತು ವಿಡಿಯೋಗಳನ್ನು ವಿಕ್ಷೀಸಬಹುದಾಗಿದೆ.
- ದೇಶದ ಆಯಾ ರಾಜ್ಯಗಳ ಕೃಷಿ ಇಲಾಖೆಯ ಅಧಿಕಾರಿಗಳು ಸಹ ತಮ್ಮ ಹೆಸರು, ಇ-ಮೇಲ್ ವಿಳಾಸ, ರಾಜ್ಯ, ಜಿಲ್ಲೆ, ಕೆ.ವಿ.ಕೆ. ಹೆಸರು ಮತ್ತು ಅವರು ಯಾವ ಚಟುವಟಿಕೆಗಳನ್ನು ಮಾಡುತ್ತಾರೆ ಉದಾ : ಮಣ್ಣು ಆರೋಗ್ಯ ಚೀಟಿ, ದ್ವಿದಳ ಧಾನ್ಯ ಮತ್ತು ಎಣ್ಣೆ ಕಾಳು ಬೀಜಗಳ ಕಿಟ್ ವಿತರಣೆ, ತೋಟಗಾರಿಕೆ ಸಸಿಗಳ ವಿತರಣೆ, ಎರೆಗೊಬ್ಬರ ತೊಟ್ಟಿಗಳ ವಿತರಣೆ ಇತ್ಯಾದಿ ಯಾವುದಾದರೂ ಒಂದು ಚಟುವಟಿಕೆಯನ್ನು ಆಯ್ಕೆ ಮಾಡಿ ಸಲ್ಲಿಸಬೇಕು, ನಂತರ ತಾಲೂಕು, ಇ-ಮೇಲ್ ವಿಳಾಸ, ದೂರವಾಣಿ ಸಂಖ್ಯೆ, ಯುಜರನೇಮ್ ಮತ್ತು ಪಾಸ್‌ವರ್ಡಗಳ ಮಾಹಿತಿಯನ್ನು ತುಂಬಿ REGISTER ಎಂಬ ಬಟನ್ ಮೇಲೆ ಬೆರಳು ಒತ್ತಿ ನೊಂದಣಿ ಮಾಡಿಕೊಳ್ಳಬಹುದಾಗಿದೆ.

Shri Bhavani, Hubli # 9448116253

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಐ.ಸಿ.ಎ.ಆರ್- ಕೃಷಿ ವಿಜ್ಞಾನ ಕೇಂದ್ರ,
ಇಂಡಿ-586209

# ಕೆ.ವಿ.ಕೆ. ಮೊಬೈಲ್ ಆ್ಯಪ್







ವಿಸ್ತರಣಾ ಹಸ್ತ ಪತ್ರಿಕೆ-25 2019-2020

ಲೇಖಕರು
ಶ್ರೀ ಮಜೀದ ಜಿ.
ಡಾ. ಆರ್. ಬಿ. ನೆಗಳೂರ
ಡಾ. ಸವಿತಾ, ಬಿ.
ಶ್ರೀಮತಿ ಹೀನಾ. ಎಮ್.ಎಸ್
ಡಾ. ಸಂತೋಷ ಶಿಂಧೆ
ಡಾ. ರವಿ, ವೈ
ಡಾ. ಸೈಯದ ಸಮೀನ ಅಂಜುಮ್

ಸಂಪಾದಕರು
ಡಾ. ಆರ್. ಬಿ. ನೆಗಳೂರ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ, ಇಂಡಿ

ಪ್ರಕಾಶಕರು
ಡಾ. ಆರ್. ಬಿ. ಬೆಳ್ಳಿ
ಸಹ ವಿಸ್ತರಣಾ ನಿರ್ದೇಶಕರು
ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ಇಂಡಿ
ದೂರವಾಣಿ: (08359) 295705

## ಕೆ.ವಿ.ಕೆ. ಮೊಬೈಲ್ ಆ್ಯಪ್

ಕೆ.ವಿ.ಕೆ. ಮೊಬೈಲ್ ತಂತ್ರಾಂಶವನ್ನು ರೈತರು, ಕೃಷಿ ಅಧಿಕಾರಿಗಳು, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಆಂಡ್ರಾಯಿಡ್ ಆಧಾರಿತ ಮೊಬೈಲ್ ದೂರವಾಣಿಯಲ್ಲಿ ಗೂಗಲ್ ಪ್ಲೇ ಸ್ಟೋರಗೆ ಭೇಟಿ ನೀಡಿ ಆಂಗ್ಲ ಭಾಷೆಯಲ್ಲಿ kvk mobile app ಎಂದು ಟೈಪ್ ಮಾಡಿ ತಾವು ಈ ತಂತ್ರಾಶವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.




- ನಂತರ ತಮ್ಮ ಹೆಸರು, ತಾಲೂಕೂ, ಜಿಲ್ಲೆ, ದೂರವಾಣಿ ಸಂಖ್ಯೆ, ಇ-ಮೇಲ್ ಐ.ಡಿ. ಪಾಸವರ್ಡ ದಾಖಲಿಸಿ ಈ ತಂತ್ರಾಂಶ ನೊಂದಣಿ ಮಾಡಬೇಕಾಗುತ್ತದೆ. ತಮ್ಮ ದೂರವಾಣಿ ಸಂಖ್ಯೆಯೇ ಯುಜರ್ ನೇಮ್ ಆಗಿರುತ್ತದೆ. ನಂತರ ಈ ತಂತ್ರಾಂಶದಲ್ಲಿ ತಾವು ಮೊದಲೆ ನೋಂದಣಿ ಮಾಡುವ ಸಮಯದಲ್ಲಿ ನೀಡಿದ ಪಾಸವರ್ಡ ಬಳಸಿ ಲಾಗಿನ್ ಆಗಬೇಕು, ಆ ಮೇಲೆ KVK ಎಂಬ ಐಕಾನ ಮೇಲೆ ಬೆರಳು ಒತ್ತಿ ರಾಜ್ಯ ಹಾಗೂ ಜಿಲ್ಲೆಗಳನ್ನು ಆಯ್ಕೆ ಮಾಡಿ ತಮ್ಮ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರವನ್ನು ಆಯ್ಕೆ ಮಾಡಬಹುದಾಗಿದೆ. ತಮ್ಮ ಜಿಲ್ಲೆಯ ಕೇಂದ್ರದ ಮುಖ್ಯಸ್ಥರ ಹೆಸರು, ವಿಳಾಸ ಹಾಗೂ ದೂರವಾಣಿ ಸಂಖ್ಯೆ ತಮ್ಮ ಮೊಬೈಲ್ ಸ್ಕ್ರಿನ್ ಮೇಲೆ ಕಾಣಿಸುತ್ತದೆ.




- ಆ ನಂತರ facilities ಎಂಬ ಐಕಾನ್ ಮೇಲೆ ಬೆರಳು ಒತ್ತಿದಾಗ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇರುವ ಸೌಲಭ್ಯಗಳ ಮಾಹಿತಿಯ ತಮ್ಮ ಸ್ಕ್ರಿನ್ ಮೇಲೆ ಮೂಡುತ್ತದೆ.

- Package of Practices ಎಂಬ ಐಕಾನ್ ಮೇಲೆ ಬೆರಳು ಒತ್ತಿದಾಗ ಕೃಷಿ ಬೆಳೆ, ತೋಟಗಾರಿಕೆ ಬೆಳೆ ಎಂಬ ಆಯ್ಕೆಗಳು ಕಾಣಿಸುತ್ತವೆ ತಾವು ತಮಗೆ ಬೇಕಾದ ಆಯ್ಕೆ ಮೇಲೆ ಬೆರಳು ಒತ್ತಿರಿ. ಇದರಲ್ಲಿ ತಮ್ಮ ಜಿಲ್ಲೆಯ ಪ್ರಮುಖ ಬೆಳೆಗಳ ಮಾಹಿತಿಯನ್ನು ತಾವು ಓದಿ ಇದರ ಉಪಯೋಗ ಮಾಡಿ ಕೊಳ್ಳಬಹುದು.

- Send Query ಎಂಬ ಐಕಾನ್ ಮೇಲೆ ಬೆರಳು ಒತ್ತಿದಾಗ ಬೆಳೆ, ಜಾನುವಾರು, ಮೀನುಗಾರಿಕೆ, ತೋಟಗಾರಿಕೆ, ಇತರೆ ಎಂಬ ಆಯ್ಕೆಗಳು ಬರುತ್ತವೆ ತಮಗೆ ಬೇಕಾದ ಆಯ್ಕೆಯ ಮೇಲೆ ಬೆರಳು ಒತ್ತಿ ನಂತರ ಸಮಸ್ಯೆ (Problem) ಎಂದು ಬರುವ ಆಯ್ಕೆಗಳಲ್ಲಿ ಯಾವುದಾದರೂ ಸೂಕ್ತ ಆಯ್ಕೆಯ ಮೇಲೆ ಬೆರಳು ಒತ್ತಿರಿ. ತದನಂತರ ತಮ್ಮ ಮೊಬೈಲ್‌ನಲ್ಲಿ ಮೊದಲೆ ತೆಗೆದುಕೊಂಡ ಚಿತ್ರ, ವಿಡೀಯೋ ಅಥವಾ ತಮ್ಮ ಧ್ವನಿಯನ್ನು ರೆಕಾರ್ಡ ಮಾಡಿ ಸಂಗ್ರಹಿಸಿ ಇಟ್ಟಿದ್ದರೆ, ಅದನ್ನು ಅಪ್‌ಲೋಡ್ ಮಾಡಬಹುದಾಗಿದೆ Submit ಎಂಬ ಐಕಾನ ಮೇಲೆ ಬೆರಳು ಒತ್ತಿ ಸಲ್ಲಿಸಬಹುದಾಗಿದೆ. ತಜ್ಞರಿಂದ ಈ ಕುರಿತು ಸಮಸ್ಯೆಗೆ ಪರಿಹಾರ ಕಂಡುಕೊಳ್ಳ ಬಹುದಾಗಿದೆ.







- ಆ ಮೇಲೆ Upcoming Event ಎಂಬ ಐಕಾನ ಮೇಲೆ ಬೆರಳು ಒತ್ತಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮುಂಬರುವ ದಿನಗಳಲ್ಲಿ ಹಮ್ಮಿ ಕೊಳ್ಳುವ ಕಾರ್ಯಕ್ರಮಗಳ ವಿವರವನ್ನು ನೋಡ ಬಹುದಾಗಿದೆ.

- ಇದರ ನಂತರ Past Event ಎಂಬ ಐಕಾನ ಮೇಲೆ ಬೆರಳು ಒತ್ತಿ ವಿಜ್ಞಾನಿಗಳ ಕ್ಷೇತ್ರ ಭೇಟಿ, ತರಬೇತಿ, ಪದ್ಧತಿ ಪ್ರಾತ್ಯಕ್ಷಿಕೆ ಕುರಿತು ಮಾಹಿತಿಯನ್ನು ತಾವು ನೋಡ ಬಹುದಾಗಿದೆ.




- ಇದಲ್ಲದೇ Weather Advisory ಎಂಬ ಐಕಾನ ಮೇಲೆ ಬೆರಳು ಒತ್ತಿ ತಮ್ಮ ಜಿಲ್ಲೆಯ ಹವಾಮಾನ ಮಾಹಿತಿಯನ್ನು ನೋಡಬಹುದಾಗಿದೆ. ಈ ಕುರಿತು ಮಾಹಿತಿಯನ್ನು ಭಾರತೀಯ ಕೃಷಿ ಹವಾಮಾನ ವಿಭಾಗ, ಪುಣೆ, ಇವರಿಂದ ಬಂದ ಮಾಹಿತಿಯನ್ನು ನೀಡಲಾಗುತ್ತದೆ.

- ಮುಂದುವರೆದು Market ಎಂಬ ಐಕಾನ ಮೇಲೆ ಬೆರಳು ಒತ್ತಿ ತಮ್ಮ ಜಿಲ್ಲೆಯ ಬೆಳೆಗಳ ಮಾರುಕಟ್ಟೆ ವಿವರಗಳಾದ ಬೆಳೆ ಹೆಸರು, ದಾಸ್ತಾನು ಆವಕ, ಕನಿಷ್ಠ ದರ, ಗರಿಷ್ಠ ದರದ, ಮಧ್ಯಮ ದರ, ಪ್ರತಿ ಕ್ವಿಂಟಾಲ ದರ ಮಾಹಿತಿಯನ್ನು ತಮ್ಮ ಸ್ಕ್ರೀನ ಮೇಲೆ ನೋಡಬಹುದಾಗಿದೆ.




ರೈತರು ಈ ಉಪಯುಕ್ತ ಆ್ಯಪ್ ಬಳಸಿ ಕೃಷಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಬಹಳ ಉಪಯುಕ್ತವಾಗಿದೆ. ಇದಲ್ಲದೇ, ಇತ್ತೀಚೆಗೆ ಎಲ್ಲರನ್ನು ಕಾಡುತ್ತಿರುವ ಮಹಾಮಾರಿ ಕೋವಿಡ-19ರ ಕುರಿತು ರಾಜ್ಯವಾರು ಸಲಹೆಗಳನ್ನು/ಮಾಹಿತಿ ಸಹ ತಾವು ಈ ಮೊಬೈಲ್ ಆ್ಯಪ್‌ನಲ್ಲಿ ಪಡೆಯ ಬಹುದಾಗಿದೆ.

ಕೆ.ವಿ.ಕೆ ಮೊಬೈಲ್ ಆ್ಯಪ್‌ನ ಇನ್ನಿತರ ಆಯ್ಕೆಗಳು ಕೆ.ವಿ.ಕೆ. ಆ್ಯಪ್ ಲಾಗಿನ್ ಪುಟದ ಬಲ ಮೇಲ್ಭಾಗದಲ್ಲಿ